# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.46/2020**

| | | | |
|---|---|---|---|
| ಹೆಸರು | : | ರಾಜು ವಡ್ಡರ | ಫ್ರಾಸಾ-6 |
| ತಂದೆಯ ಹೆಸರು | : | ನಾಗಪ್ಪ | ಚಾಸಾ-1 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಸೆಂಟರಿಂಗ್ ಕೆಲಸ | |
| ವಿಳಾಸ | : | ಕೆರೂರ | |

ದಿಃ 17.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ನ್ಯಾಯಾಲಯದಲ್ಲಿ ಮುಂದೆ ಇರುವ ಆರೋಪಿತರು ಯಾರು ಗೊತ್ತಿಲ್ಲ. ನನಗೆ ಚಾಸಾ-4 ರಿಂದ 7 ಗೊತ್ತಿಲ್ಲ. ಈಗ 4-5 ವರ್ಷಗಳ ಹಿಂದ ಕೆರೂರ ಆಸ್ಪತ್ರೆಯಲ್ಲಿ ನಾನು ದಾಖಲೆಗೆ ಸಹಿ ಮಾಡಿದ್ದೇನೆ. ಅದನ್ನು ನೋಡಿ ಗುರುತಿಸಿದಂತೆ ಅದನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಆಸ್ಪತ್ರೆಗೆ ಬಂದಿದ್ದರು. ನನಗೆ ಗಾಯ ಆಗಿತ್ತು ಬಿದ್ದಿದ್ದೆ ಅದಕ್ಕೆ ವಿಚಾರಿಸಿದ್ದರು. ನಾನು ಬೈಕನ ಮೇಲಿಂದ ಬಿದ್ದಿದ್ದೆ ನನ್ನನ್ನು ಯಾರು ಹೊಡೆಬಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಜಾತಿ ಹಿಡಿದು ಬೈದಿಲ್ಲ. ನನಗೆ ಐದು ಗಾಯಗಳಾಗಿ ತಲೆಗೆ ಪೆಟ್ಟಾಗಿತ್ತು. ನನಗೆ ಹೇಗೆ ಗಾಯ ಆಯಿತು ಈಗ ನೆನಪಾಗುತ್ತಿಲ್ಲ. ನನಗೆ ನೆನಪಾಗುವಂತೆ ದ್ವಿಚಕ್ರ ವಾಹನದ ಮೇಲಿಂದ ಬಿದ್ದಿದ್ದೆ.

ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆಮಾಲು-1 ಎಂದು ಗುರುತಿಸಿದ್ದು ಇದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ** ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿಃ 07.03.2020 ರಂದು ಮಧ್ಯಾಹ್ನ 3.30 ಗಂಟೆಗೆ ನನ್ನ ಕಾರು ಬಾಡಿಗೆಗೆ ತೆಗೆದುಕೊಂಡ 2 ನೇ ಆರೋಪಿ ಮೊಹಮ್ಮದ ಆರೀಫ ಮುಲ್ಲಾ ಡ್ಯಾಮೇಜ ಮಾಡಿ ತಂದುಕೊಟ್ಟಿದ್ದು ಅದನ್ನು ರೀಪೇರಿ ಮಾಡಲು ಹೇಳಿದ್ದಕ್ಕೆ ವಿನಾ ಕಾರಣ ಜಗಳ ತೆಗೆದು ಈಗ ಓದಿ ಹೇಳಿದಂತೆ

ಈ ದಿವಸ ದಿಃ 07.03.2020 ಕೆರೂರ ಮುಬಾರಕ ಇವರ ಮನೆಯ ಸೆಂಟರಿಂಗ ಪ್ಲೇಟ ತೆಗೆದುಕೊಂಡು ಬರಲು ಮೊಹಮ್ಮದ ಆರೀಫ ಹುಸೇನಸಾಬ ಮುಲ್ಲಾ ಇವನ ಮನೆಯ ಮುಂದೆ ಹಾಯ್ದು ಹೊರಟಾಗ - - - - - ಒಳಪೆಟ್ಟು ಪಡಿಸಿದ್ದು ಮತ್ತು ಹಲ್ಕಟ ಬೈದಿದ್ದು ಅವರೆಲ್ಲರ ಮೇಲೆ ನನ್ನದು ಪಿರ್ಯಾದಿ ಇರುತ್ತದೆ. ನಾನು ನನಗಾದ ಗಾಯದ ಬಗ್ಗೆ ಉಪಚಾರ ಪಡೆದುಕೊಂಡಿದ್ದೇನೆ ಎಂದರೆ ಇಲ್ಲ. ಈಗ ಓದಿ ಹೇಳಿದಂತೆ ನಿಪಿ-7 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದ ಎಂದರೆ ಇಲ್ಲ. ಪೊಲೀಸರ ಮುಂದೆ ಪುನಃ ಈಗ ಓದಿ ಹೇಳಿದಂತೆ ಆರೋಪಿತರು ಮೂರು ಜನ ಹಲ್ಲೆ ಮಾಡಿದ ಬಗ್ಗೆ ಪುರವಣಿ ಹೇಳಿಕೆಯನ್ನು ಸಹ ನಿಪಿ-8 ರಂತೆ ಡಿ.ವಾಯ್.ಎಸ್.ಪಿ ರವರ ಮುಂದೆ ನೀಡಿದ್ದೆ ಎಂದರೆ ಇಲ್ಲ. ಆರೋಪಿತರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಇಲ್ಲ.

**ಪಾಟೀ ಸವಾಲುಃಶ್ರೀ.ಎನ್.ಎಲ್.ಹೆಚ್/ಎಸ್.ಸಿ.ಹೆಚ್ ವಕೀಲರಿಂದ ಆರೋಪಿ ಪರ**

ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.